ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಅನುದಾನ

670 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ 1995-96, 1996-97 ಹಾಗೂ 1997-98ನೇ ಸಾಲುಗಳಲ್ಲಿ ಸರ್ಕಾರದವರು ಬಿಡುಗಡೆ ಮಾಡಿದ ಅನುದಾನ ಎಷ್ಟು?

ಆ) ಈ ಶಾಲೆಗಳಿಗೆ ಬೇಕಾದ ಶಿಕ್ಷಕರು ಮತ್ತು ಇತರೇ ಸಿಬ್ಬಂದಿಗಳನ್ನು ಸರ್ಕಾರದವರು ನೇಮಿಸಿದ್ದಾರೆಯೇ?

ಇ) ಈ ಶಾಲೆಗಳಲ್ಲಿ ಇನ್ನೂ ಎಷ್ಟು ಹುದ್ದೆಗಳು ಖಾಲಿ ಇವೆ (ಶಾಲಾವಾರು ವಿವರ ನೀಡುವುದು)

ಈ) ಇಲ್ಲಿಯವರೆಗೆ ಈ ಶಾಲೆಗಳಿಗೆ ಇನ್ನೂ ಎಷ್ಟು ಅನುದಾನ ನೀಡಬೇಕಾಗಿದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ)

ವರ್ಷ	ಬಿಡುಗಡೆಯಾದ ಹಣ	ವೆಚ್ಚವಾದ ಹಣ
1995-96	ಇಲ್ಲ	ಇಲ್ಲ
1996-97	ರೂ. 20.00 ಲಕ್ಷ	ರೂ. 17.77 ಲಕ್ಷ
1997-98	ರೂ. 100.00 ಲಕ್ಷ	ರೂ. 41.00 ಲಕ್ಷ

ಆ) ಸರ್ಕಾರವು ಪ್ರತಿ ವಸತಿ ಶಾಲೆಗೆ ಅಗತ್ಯವಿರುವ ಶಿಕ್ಷಕರು ಮತ್ತು ಇತರೇ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಿ ಆದೇಶ ಹೊರಡಿಸಿದೆ. ಮಂಜೂರಾದ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಡಳಿತ ಮಂಡಳಿಯು ನೇಮಿಸುತ್ತದೆ.

ಇ) 1. ರಾಮನಗರ - 5

2. ಕೋಟೇಕಾರ್ ಮಂಗಳೂರು - 2

3. ಗುಲ್ಬರ್ಗಾ - 2

4. ಬಿಜಾಪುರ - 2

5. ಶ್ರೀರಂಗಪಟ್ಟಣ - ನೇಮಕಾತಿಯನ್ನು ಆಡಳಿತ ಮಂಡಳಿ ಮಾಡಿದ್ದು ಸಿಬ್ಬಂದಿ ನೇಮಕಾತಿಗೆ ಇನ್ನೂ ಇಲಾಖೆಯು ಅನುಮೋದನೆ ನೀಡಬೇಕಾಗಿದೆ.

ಈ) 1997-98ನೇ ಸಾಲಿನ ಅಂತ್ಯದವರೆಗೆ ಅನುದಾನ ನೀಡಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಆಸ್ಪತ್ರೆಗಳ ಪ್ರಮಾಣ

672 - ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿವಿಧ ಜಿಲ್ಲೆಗಳಲ್ಲಿರುವ ಸಾರ್ವಜನಿಕ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು ಎಷ್ಟು? ತಾಲ್ಲೂಕುವಾರು ವಿವರ ನೀಡುವುದು?

ಆ) ಈ ಎಲ್ಲಾ ಆಸ್ಪತ್ರೆಗಳು ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿವೆಯೇ?

ಇ) ವೈದ್ಯರು ಇಲ್ಲದೆ ಇರುವಂತಹ ಆಸ್ಪತ್ರೆಗಳು ಯಾವುವು? (ತಾಲ್ಲೂಕುವಾರು ವಿವರ ನೀಡುವುದು).

ಈ) ವೈದ್ಯರ ನೇಮಕಾತಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 242 ಸಾರ್ವಜನಿಕ ಆಸ್ಪತ್ರೆಗಳು, 1601 ಪ್ರಾ.ಆ. ಕೇಂದ್ರಗಳು ಹಾಗೂ 589 ಪ್ರಾ.ಆ. ಘಟಕಗಳು ಇವೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.

ಆ) ಹೌದು.

ಇ) 203 ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯರು ಇರುವುದಿಲ್ಲ. ವಿವರ ಪಟ್ಟಿ ಲಗತ್ತಿಸಿದೆ.

ಈ) ಗ್ರಾಮಾಂತರ ಪ್ರದೇಶದ ಪ್ರಾ.ಆ. ಕೇಂದ್ರ ಹಾಗೂ ಪ್ರಾ.ಆ. ಘಟಕಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.